(Off) +91(0821)2526301-53
(Fax) +91(0821) 2330166
e.mail: ceo_zp_mys@nic.in
admzpmys@gmail.com

**ಜಿಲ್ಲಾ ಪಂಚಾಯತ್, ಮೈಸೂರು**

**ZILLA PANCHAYATH. MYSURU**

ಸಂಖ್ಯೆ:ಜಿಪಿಇ/06/2016-17 ದಿನಾಂಕ: 27.01.2016

# ಸುತ್ತೋಲೆ

**ವಿಷಯ:** ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಕನಿಷ್ಠ ವೇತನವನ್ನು ನೀಡುವ ಬಗ್ಗೆ.

**ಉಲ್ಲೇಖ:** 1.ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 22 ಗ್ರಾಪಂಸಿ 2014 ದಿನಾಂಕ 10.09.2014
2.ಸರ್ಕಾರದ ಪತ್ರ ಸಂಖ್ಯೆ : ಗ್ರಾಅಪ 27 ಗ್ರಾಪಂಸಿ 2015 ದಿನಾಂಕ 09.03.2016
3.ಜಿಲ್ಲಾ ಪಂಚಾಯತ್ ಮಾನ್ಯ ಅಧ್ಯಕ್ಷರ ಅಧಕ್ಷತೆಯಲ್ಲಿ ದಿನಾಂಕ 11.01.2017ರಂದು ನಡೆದ ಪೌರಕಾರ್ಮಿಕ ಮುಖಂಡರುಗಳ ಸಭೆ.

* * *

ಗ್ರಾಮ ಪಂಚಾಯತ್ ನೌಕರರಿಗೆ ಸರ್ಕಾರವು ನಿಗಧಿಪಡಿಸಿದ ದರದಲ್ಲಿ ವಿಳಂಬವಿಲ್ಲದೆ ವೇತನ ಪಾವತಿ ಮಾಡುವ ಕುರಿತಂತೆ ಈಗಾಗಲೇ ಅನೇಕ ನಿರ್ದೇಶನಗಳನ್ನು ನೀಡಲಾಗಿದೆ. ದಿನಾಂಕ 09.01.2017ರಂದು ಜಿಲ್ಲಾ ಪಂಚಾಯತ್ ಕಛೇರಿ ಮುಂದೆ ಧರಣಿ ನಡೆಸಿದ ಗ್ರಾಮ ಪಂಚಾಯತ್ ಪೌರಕಾರ್ಮಿಕರುಗಳು ತಮಗೆ ಸರಿಯಾದ ಸಮಯದಲ್ಲಿ ವೇತನ ದೊರೆಯದ ಬಗ್ಗೆ ಹಾಗೂ ಸೇವಾ ಭದ್ರತೆ ಇಲ್ಲದಿರುವ ಬಗ್ಗೆ ತಮ್ಮ ಅಹವಾಲು ಸಲ್ಲಿಸಿದ್ದು, ಉಲ್ಲೇಖ(3)ರ ರೀತ್ಯಾ ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸದರಿ ವಿಷಯದ ಬಗ್ಗೆ ಸಭೆ ನಡೆಸಿ ಚರ್ಚಿಸಲಾಗಿರುತ್ತದೆ.

ಉಲ್ಲೇಖ(1)ರ ಸರ್ಕಾರದ ಆದೇಶ ಹಾಗೂ ತದನಂತರ ಉಲ್ಲೇಖ(2)ರ ರೀತ್ಯಾ ಹೊರಡಿಸಲಾದ ಸ್ಪಷ್ಟೀಕರಣದ ರೀತ್ಯಾ ಗ್ರಾಮ ಪಂಚಾಯಿತಿಗಳಲ್ಲಿನ ಸಿಬ್ಬಂದಿ ವರ್ಗದ ಮಾದರಿಯನ್ನು ವಿವರಿಸಲಾಗಿದೆ. ಸದರಿ ಆದೇಶ/ನಿರ್ದೇಶನಗಳ ರೀತ್ಯಾ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ನಿಯಮಾನುಸಾರ ಕ್ರಮ ವಹಿಸುತ್ತಿರುವುದರ ಬಗ್ಗೆ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ನಿಗಾ ವಹಿಸುವುದು ಅತ್ಯವಶ್ಯಕವಾಗಿರುತ್ತದೆ. ಗ್ರಾಮ ಪಂಚಾಯಿತಿಗಳಲ್ಲಿ ಪೌರಕಾರ್ಮಿಕರನ್ನೂ ಒಳಗೊಂಡಂತೆ ಸಿಬ್ಬಂದಿವರ್ಗದವರ ಸೇವೆ ಪಡೆದಾಗ, ಸದರಿ ಸಿಬ್ಬಂದಿವರ್ಗದವರಿಗೆ ನಿಯಮಾನುಸಾರ ವೇತನ ಪಾವತಿಸುವುದು ಗ್ರಾಮ ಪಂಚಾಯಿತಿಗಳ ಕರ್ತವ್ಯವಾಗಿರುತ್ತದೆ. ಆದುದರಿಂದ ಈ ನಿಟ್ಟಿನಲ್ಲಿ ಎಲ್ಲಾ ಗ್ರಾಮ ಪಂಚಾಯತ್‌ಗಳು ನಿಗಧಿತ ಅವಧಿಯಲ್ಲಿ ನಿಯಮಾನುಸಾರ ನಿಗಧಿಪಡಿಸಿರುವ ವೇತನ ಪಾವತಿ ಮಾಡುತ್ತಿರುವ ಬಗ್ಗೆ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿ ಮಾಹೆ ವಿಶೇಷ ಗಮನ ಹರಿಸಿ, ಉಲ್ಲೇಖ(3)ರ ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ರೀತ್ಯಾ ಈ ಕೆಳಕಂಡಂತೆ ಕ್ರಮ ವಹಿಸಲು ಸೂಚಿಸಲಾಗಿದೆ.

1. ಗ್ರಾಮ ಪಂಚಾಯಿತಿಗಳಲ್ಲಿ ಎಲ್ಲಾ ಸಿಬ್ಬಂದಿವರ್ಗದವರಿಗೆ ಸರ್ಕಾರ ನಿಗಧಿಪಡಿಸಿದ ದರದಲ್ಲಿ ನಿಗಧಿತ ಅವಧಿಯೊಳಗೆ ವೇತನ ಪಾವತಿ ಮಾಡುತ್ತಿರುವ ಬಗ್ಗೆ ಪರಿಶೀಲಿಸುವುದು.
2. ಗ್ರಾಮ ಪಂಚಾಯಿತಿ ಸಿಬ್ಬಂದಿವರ್ಗದವರಿಗೆ ವೇತನ ಪಾವತಿಸುವಾಗ, ಬಾಕಿ ಮೊಬಲಗು ಪಾವತಿಸುವಾಗ ತಾತ್ಕಾಲಿಕ ಅನುದಾನ ಕೊರತೆ ಬಿದ್ದಲ್ಲಿ, ಅನುಕ್ರಮವಾಗಿ ಪೌರಕಾರ್ಮಿಕರು, ವಾಟರ್‌ಮನ್, ಅಟೆಂಡರ್, ನಂತರ ಬಿಲ್ ಕಲೆಕ್ಟರ್ ಮತ್ತು ಕ್ಲರ್ಕ್ ಕಂ ಡಿಇಒ ಗಳಿಗೆ ಆದ್ಯತಾನುಸಾರ ವೇತನ ಬಟವಾಡೆಗೆ ಕ್ರಮ ವಹಿಸುವುದು.
3. ಸೇವೆಯಲ್ಲಿರುವಾಗ ನಿಧನರಾದ/ನಿಧನರಾಗುವ, ಸೇವೆಯಿಂದ ನಿವೃತ್ತಿ ಹೊಂದಿದ/ಹೊಂದುವ ಗ್ರಾಮ ಪಂಚಾಯಿತಿ ನೌಕರರುಗಳಿಗೆ ಉಲ್ಲೇಖ(1)ರ ಸರ್ಕಾರದ ಆದೇಶದಂತೆ ನಿಯಮಾನುಸಾರ ನಿವೃತ್ತಿ ಸೌಲಭ್ಯ ಉಪದಾನಗಳು ದೊರೆಯುವಂತೆ ನೋಡಿಕೊಳ್ಳುವುದು.